ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**ಸಿ.ಸಿ.ನಂ.1129/2023.**

ದಿನಾಂಕಃ**10.12.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಹರೀಶ್ | ಚಾಸಾ-1, ಪ್ರಾಸಾ-1. |
| ತಂದೆಯ ಹೆಸರು | ಓಭಳಯ್ಯ | |
| ವಯಸ್ಸು | 40 ವರ್ಷ | |
| ಉದ್ಯೋಗ | ಡ್ರೈವರ್ | |
| ವಾಸ | ಸರಸ್ವತಿಪುರ ಗ್ರಾಮ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಮೃತ ಗಿರೀಶ್ ನನ್ನ ಅಣ್ಣ. ಚಾಸಾ 2 ರಿಂದ 5 ಗೊತ್ತು. ದಿಃ15.09.2022 ರಂದು ನನ್ನ ಅಣ್ಣ ಗಿರೀಶನ್ನು ಕಡೂರಿನಿಂದ ಸರಸ್ವತಿಪುರಕ್ಕೆ ಆತನ ಬೈಕಿನಲ್ಲಿ ಬರುತ್ತಿದ್ದಾಗ ರಾತ್ರಿ ಸು.11.30 ಗಂಟೆಗೆ ಕಂಸಾಗರದ ಗೇಟ್ ಬಳಿ ಒಂದು ಲಾರಿಯು ರಸ್ತೆಯಲ್ಲಿ ನಿಂತಿತ್ತು. ಸದರಿ ಲಾರಿ ಇಂಡಿಕೇಟರ್ ಹಾಕದೆ ಹಾಗೂ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳದೆ ರಸ್ತೆಯಲ್ಲಿ ನಿಲ್ಲಿಸಿದ್ದರು. ಗಿರೀಶ್ ರವರು ಬೈಕ್ ಅನ್ನು ಓಡಿಸಿಕೊಂಡು ಲಾರಿಯು ನಿಂತಿದ್ದು ಕಾಣದೆ ಲಾರಿಯ ಹಿಂಭಾಗಕ್ಕೆ ಬೈಕ್ ಡಿಕ್ಕಿಯಾಗಿ ಅಪಘಾತವಾಗಿತ್ತು. ಅಪಘಾತದ ವಿಚಾರವನ್ನು ಚಾಸಾ 4 ನನಗೆ ತಿಳಿಸಿದರು. ಆ ದಿನ ಅಪಘಾತವಾಗುವಾಗ ನನ್ನ ಅಣ್ಣನ ಬೈಕಿನ ಹಿಂದೆ ಬೇರೆ ಬೈಕಿನಲ್ಲಿ ಚಾಸಾ 4, 5 ರವರು ಸಹಃ ಬರುತ್ತಿದ್ದರು. ನಾನು ತಕ್ಷಣ ಅಪಘಾತ ಸ್ಥಳಕ್ಕೆ ಬಂದು ನೋಡಿದಾಗ ಅಣ್ಣನ ಹೆಲ್ಮೆಟ್ ಪುಡಿಯಾಗಿ ತಲೆಗೆ, ಕಾಲಿಗೆ ಎದೆಗೆ ತೀವ್ರ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದನು. ಸದರಿ ಲಾರಿಯನ್ನು ಆರೋಪಿ ಚಾಲನೆ ಮಾಡುತ್ತಿದ್ದರು. ಲಾರಿಯ ಸಂಖ್ಯೆ ನನಗೆ ನೆನಪಿಲ್ಲ. ಈ ಅಪಘಾತದ ಕುರಿತು ನಾನು ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ.

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು, ಸದರಿ ದಾಖಲೆಯು ದೂರು ಆಗಿದ್ದು ಅದನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ 1 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿ ನೀಡಿರುತ್ತೇನೆ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ  ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**,** ಪಾಟೀ ಸವಾಲನ್ನು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀಸವಾಲುಃ ಮಾನ್ಯ ಸ ಸ ಅ ರವರಿಂದ ಃ</u>

ನನ್ನ ಅಣ್ಣ ಚಾಲನೆ ಮಾಡುತ್ತಿದ್ದ ಬೈಕ್ ಸಂಖ್ಯೆ ಕೆ ಎ 18 ಕ್ಯೂ 6077 ಎಂದರೆ ಸರಿ. ಅದೇ ರೀತಿ ಲಾರಿ ಸಂ.ಕೆಎ 53 ಎ 4882 ಎಂದರೆ ಸರಿ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ**.** ಸಿ ಬಿ ವಕೀಲರಿಂದಃ</u>

ನಾನು ಪೊಲೀಸ್ ಠಾಣೆಯಲ್ಲಿ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ನಿಪಿ 1 ನ್ನು ಪೊಲೀಸರು ಬರೆದಿರುತ್ತಾರೆ, ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ನಿಪಿ 1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ 1 ನ್ನು ನನಗೆ ಓದಿ ಹೇಳಿರುವುದಿಲ್ಲ. ಅಪಘಾತ ನಾನು ನೋಡಿಲ್ಲ ಎಂದರೆ ಸರಿ. ಹಾಗಾಗಿ ಅಪಘಾತ ಯಾರ ತಪ್ಪಿನಿಂದ ಆಯಿತು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಕಡೂರಿನಿಂದ-ಚಿಕ್ಕಮಗಳೂರು, ಚಿಕ್ಕಮಗಳೂರಿನಿಂದ-ಕಡೂರಿಗೆ ವಾಹನಗಳು ಓಡಾಡುತ್ತಿದ್ದವು ಎಂದರೆ ಸರಿ. ಸದರಿ ರಸ್ತೆ ಸು.35 ಅಡಿ ಅಗಲದ ರಸ್ತೆ ಎಂದರೆ ಸರಿ. ಲಾರಿಯು ರಸ್ತೆಯಿಂದ ಬದಿಯಲ್ಲಿ ಸುಮಾರು 8 – 10 ಅಡಿ ದೂರದಲ್ಲಿ ನಿಂತಿತ್ತು ಎಂದರೆ ಸರಿಯಲ್ಲ. ಲಾರಿಯು ರಸ್ತೆಯ ಬಿಳಿ ಪಟ್ಟೆಯ ಪಕ್ಕದಲ್ಲಿಯೇ ನಿಂತಿತ್ತು ಅಂದರೆ ಲಾರಿಯು ½ ರಸ್ತೆ ಬಿಟ್ಟು ನಿಂತಿತ್ತು.

ಲಾರಿಯು ½ ರಸ್ತೆಯಲ್ಲಿ ನಿಂತಿದ್ದರೆ ಬೇರೆ ಯಾವುದೇ ವಾಹನಗಳು ಓಡಾಡಲು ಸಾದ್ಯವಿಲ್ಲ ಎಂದರೆ ಸರಿಯಲ್ಲ. ಲಾರಿಯ ವೀಲ್ ಜಾಮ್ ಆಗಿ ಲಾರಿಯು ರಸ್ತೆಯ ಎಡಭಾಗದಲ್ಲಿ ನಿಂತಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎಂದರೆ ಸರಿಯಲ್ಲ. ನನ್ನ ಅಣ್ಣ, ಚಾಸಾ 4, 5 ರವರು ಒಂದೇ ಬೈಕಿನಲ್ಲಿ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಲಾರಿಯ ಇಂಡಿಕೇಟರ್ ಹಾಕಿದ್ದರು

ಎಂದರೆ ಸರಿಯಲ್ಲ. ನನ್ನ ಅಣ್ಣನೇ ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಅತಿವೇಗವಾಗಿ ಹೋಗಿ ನಿಯಂತ್ರಿಸಲಾಗದೆ ನಿಂತಿದ್ದ ಲಾರಿಗೆ ಡಿಕ್ಕಿಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಚಾಸಾ 5 ನನ್ನ ಅತ್ತೆಮಗ. ಚಾಸಾ 4 ನನ್ನ ಸ್ನೇಹಿತ. ನನ್ನ ಅಣ್ಣನಿಗೆ ಚಾಲನ ಪರವಾನಗೆ ಇತ್ತು ಹಾಗೂ ಆತನ ಬೈಕಿಗೆ ವಿಮೆ ಇತ್ತು. ನನ್ನ ಅಣ್ಣನಿಗೆ ಚಾಲನಾ ಪರವಾನಗೆ ಮತ್ತು ಬೈಕಿಗೆ ವಿಮೆ ಇಲ್ಲದ ಕಾರಣ ಪರಿಹಾರದ ಹಣ ಪಡೆಯಲು ಆರೋಪಿಯ ವಿರುದ್ಧ ಈ ಸುಳ್ಳು ಕೇಸು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ, ಆರೋಪಿಯು ಲಾರಿಯನ್ನು ರಸ್ತೆಯ ಬದಿಯಲ್ಲಿಯೇ ವೀಲ್ ಜಾಮ್ ಆಗಿದ್ದ ಕಾರಣ ನಿಲ್ಲಿಸಿಕೊಂಡಿದ್ದು ಅದನ್ನು ಗಮನಿಸದೆ ನನ್ನ ಅಣ್ಣನೇ ಡಿಕ್ಕಿಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

ನಾನು ಸ್ಥಳಕ್ಕೆ ಹೋದಾಗ ಪೊಲೀಸರು ಸಹ ಬಂದಿದ್ದರು. ಆಸ್ಪತ್ರೆಗೆ ಪೊಲೀಸರು ಬಂದಿರಲಿಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.